ಬಿಡುತ್ತಾನೆ ಬದುಕಿಗೋಸ್ಕರ. 'ಒಮ್ಮೆ ಬದುಕಿದರೆ ಸಾಕು ದೇವರೆ ಮತ್ತೆ ತಮ್ಮಿಂದ ಯಾವ ಪಾಪಕರ್ಮಗಳೂ ನಡೆಯದಂತೆ ಬಾಳುತ್ತೇವೆ' ಎಂದು ಹರಕೆ ಹೊರುತ್ತಾರೆ. ಆಗಲೆ ನನ್ನವರು ತನ್ನವರ್ಯಾರು ಎಂಬ ಸತ್ಯವನ್ನು ಶೋಧಿಸುವ ಒಳಗಣ್ಣು ತೆರೆದು ಮನಸ್ಸು ತಿಳಿಗೊಳ್ಳತೊಡಗುತ್ತದೆ. ರಾಮಪ್ಪನ ಬದಲಾದ ಸ್ವಭಾವವನ್ನು ನೋಡಿ ಹಾಗೇ ಅಂದುಕೊಂಡಿದ್ದಳು. ಹಾಗೆ ಪುನರ್ಜನ್ಮ ಪಡೆದವನಂತೆ ಮತ್ತೆ ಮನೆಗೆ ಪ್ರವೇಶಿಸಿದ ರಾಮಪ್ಪ ಕಣ್ಣಲ್ಲಿ ನೀರು ತುಂಬಿಕೊಂಡು ಎಂದಿಲ್ಲದ ಪ್ರೀತಿ, ವಿನಮ್ರತೆಯಲ್ಲಿ ಸೀತೆಯ ಕೈ ಹಿಡಿದುಕೊಂಡು ಹಲುಬತೊಡಗಿದ–

'ಸೀತಾ... ನನ್ನನ್ನು ಕ್ಷಮಿಸು. ನನ್ನಿಂದಾಗಿ ನೀನು ಸಾಕಷ್ಟು ಕಷ್ಟವನ್ನುಂಡಿದ್ದಿ. ಇನ್ನು ಮುಂದೆ ಯಾವ ಕಷ್ಟವನ್ನು ಕೊಡೋದಿಲ್ಲ. ಇದೊಂದು ಸಾರಿ ನನ್ನನ್ನು ಕ್ಷಮಿಸಿ ಸ್ವೀಕರಿಸು. ಮುಂದೆ ನಾನ್ಯಾವತ್ತೂ ಕುಡಿಯಲ್ಲ, ನಿನ್ನನ್ನು ಬಿಟ್ಟು ಎಲ್ಲೂ ಹೋಗಲ್ಲ' ಎಂದು ಗೋಗರೆದಾಗ ತಾನೂ ಅತ್ತು ಸಮಾಧಾನಪಡಿಸಿದ್ದಳು. ದಿನವೂ ಅವರು ಮನೆಗೆ ಬರುವಂತಾಗಲಿ ದೇವರೆ ಎಂದು ಬೇಡಿಕೊಳ್ಳುತ್ತಿದ್ದ ಸೀತೆ ಸಂಭ್ರಮದಿಂದ ದೇವರೆದುರು ತುಪ್ಪದದೀಪ ಹಚ್ಚಿಟ್ಟು ಗಂಡನಿಗೂ ಕೈಮುಗಿಯಲು ಹೇಳಿದ್ದಳು. ಮನೆಗೆ ಸೇರಿದ ಮನೆಯೊಡನಿಗಾಗಿ ದೇವರಿಗೆ ಪಾಯಸದ ನೈವೇದ್ಯ ಮಾಡಿ ಕೃತಜ್ಞತೆಗಳನ್ನು ಸಲ್ಲಿಸಿದಳು.

ರಾಮಪ್ಪ ಇನ್ನಿಲ್ಲದ ಖುಷಿಯಿಂದ ಸೀತೆಯನ್ನು ಕರೆದು, 'ಈ ಬ್ಯಾಗಿನಲ್ಲಿ ಪಾಸ್ ಬುಕ್ಕುಗಳಿವೆ, ಇಲ್ಲಿ ಎಟಿಎಂ ಕಾರ್ಡು. ಅದರ ಪಾಸ್ ವರ್ಡು ಮೊಬೈಲಿನಲ್ಲಿ ಬರೆದಿಟ್ಟುಕೋ. ನನಗೆ ಮರೆತುಹೋದೀತು. ನನಗೇನಾದರೂ ಹೆಚ್ಚುಕಡಿಮೆ ಆದರೆ ನನ್ನ ಆರೈಕೆಗೆ ದುಡ್ಡು ಬೇಕಾದರೆ ಈ ಬ್ಯಾಂಕಿನಲ್ಲಿ ಚಿಲ್ಲರೆ ಇದೆ. ಅದನ್ನು ವಿತ್‌ಡ್ರಾ ಮಾಡ್ಕೋ. ಈ ಚೆಕ್ ಬುಕ್ಕೂ ಇಟ್ಕೋ. ಇಕಾ ಈ ಕ್ಯಾಷೂ ಇಟ್ಕೋ' ಎಂದು ಸೈನು ಹಾಕಿದ ಚೆಕ್ಕುಗಳನ್ನು ರಾಮಪ್ಪ ಅವಳ ಕೈಗಿಡುವಾಗ ಎಲ್ಲವನ್ನು ತೋರಿಸಿ ತೋರಿಸಿ ತಿಳಿಸಿ ಹೇಳುತ್ತಿರುವಾಗ ಸೀತೆಗೆ ಇವರೇಕೆ ಹೀಗೆ ಆಡುತ್ತಾರೆಂದು ಗಲಿಬಿಲಿಗೊಂಡಳು. ಅವನ ಯಾವ ಮಾತು ಕೇಳಿಸುತ್ತಿರಲಿಲ್ಲ... ಒಂದೇ ಸಮನೇ ದುಃಖಿಸುತ್ತಿದ್ದಳು. ಏನಾದರೂ ತಲೆ ಗಿಲೆ ಕೆಟ್ಟಿದೆಯೇ? ಹಿಮಾಲಯದಲ್ಲಿದ್ದೆ ಎನ್ನುವವನ ಹತ್ತಿರ ಈ ಚೆಕ್‌ಬುಕ್ಕು, ಎಟಿಂ ಕಾರ್ಡು ಹೇಗೆ ಬಂದವು? ಏನು ಮಾಡುತ್ತಿದ್ದ. ಎಲ್ಲೆಲ್ಲಿ ಅಲೆದಾಡಿದ? ಮನಸ್ಸು ಕಲಕಿದ ಕೆರೆಯಂತಾಯಿತು. ವಿಚಿತ್ರ ಭಯವೂ ಆವರಿಸತೊಡಗಿತು ಸೀತೆಗೆ. ಅವನ ಬರುವಿಕೆಯ ಸಂತಸ, ಹಿಂದಿನ ಹಿಂಸೆ, ನೋವು, ಸ್ಥಿತಿ ನೆನೆದು ತಾನು ಪಟ್ಟ ನೋವಿಗಿಂತ ಅವ ತನಗೆ ಎಂದೂ ತೋರದ ಪ್ರೀತಿ, ನಂಬಿಕೆ, ಮುಕ್ತವಾಗಿ ಅವಳೊಂದಿಗೆ ವ್ಯವಹರಿಸದ ಅಸಹನೀಯ ಬದುಕನ್ನು ನೆನೆದು ಸೀತೆ ಕುಸಿಯುತ್ತಿದ್ದಳು. ಎದೆಯಲ್ಲಿ ಮಡುಗಟ್ಟಿ ನಿಂತ ನೋವು ನಿಲ್ಲದೇ ಕಣ್ಣಲ್ಲಿ ಒಸರುತ್ತಿತ್ತು. ಭಯ ವಿಸ್ಮಯದಲ್ಲಿ ಸೀತೆಯ ಬಾಯಿಕಟ್ಟಿಹೋಯಿತು. ಅವನ ನಡವಳಿಕೆಯನ್ನು ನೋಡಿ ಹೇಗೆ ವರ್ತಿಸಬೇಕೋ ತಿಳಿಯದೇ ಗಲಿಬಿಲಿಗೊಂಡಳು. ಒಂದಿನವೂ ಅವನ ಸಂಬಳ ಕೇಳಿದವಳಲ್ಲ, ಪಾಸ್ ಬುಕ್ ನೋಡಿದವಳಲ್ಲ, ಅವನ ಪರ್ಸಿಗೆ ಕೈ ಹಚ್ಚಿದವಳಲ್ಲ. ಈಗ ಅವನ ಪಾಸ್ ಬುಕ್ಕು, ಅವನ ಹಣ ತಗೊಂಡು ತಾನೇನು ಮಾಡಬೇಕಿದೆ ಅನಿಸುತ್ತಿತ್ತು. ಎಂದೂ ಆ ಕಡೆ ಕಣ್ಣುಹಾಕಿದವಳೇ ಅಲ್ಲ ಸೀತೆ. ತನ್ನ ಸಂಬಳದಲ್ಲೇ ಮಕ್ಕಳ ಬೇಕು ಬೇಡಗಳು, ತನಗೆ ಬಟ್ಟೆ ಬರೆ, ಹಬ್ಬ ಹುಣ್ಣಿಮೆಗಳೆಲ್ಲ ನಡೆಯುತ್ತಿದ್ದವು. ಇದ್ದಾಗ ರಾಮಪ್ಪನೇ ಮನೆಗೆ ದಿನಸಿ ಸಾಮಾನು, ಅಕ್ಕಿ ಬೇಳೆ ಎಲ್ಲ ತಂದು ಹಾಕುತ್ತಿದ್ದ. ಇಬ್ಬರೂ ಇದೇ ಕರಾರಿನಲ್ಲಿ ಮದುವೆಯಾಗಿದ್ದೇವೇನೊ ಎನ್ನುವ ತರ. ಅವಳು